ರಣಭೂಮಿಯ ಹಾಗೆ ರಸ್ತೆ ಕಾಣುತ್ತಿತ್ತು. ನೂರು ಮೀರಿ ವಯಸ್ಸಾದ, ನೂರಾರು ಟನ್ ಮಿಡಿ ಬಿಡುತ್ತಿದ್ದ ಮರಗಳು ಕ್ಷಣಾರ್ಧದೊಳಗೆ ನೆಲ ಕಚ್ಚುತ್ತಿದ್ದವು. ಪುಡಿಯಾಗುತ್ತಿದ್ದವು. ಈ ಮಿಡಿಗಳನ್ನು ಸಂಗ್ರಹಿಸಿ ಉಪ್ಪಿನ ಕಾಯಿ ಮಾಡಿ ಮಾರಿ ಎಂಎನ್ ಪಿಕಲ್ಸ್ ಎಂಬ ಕಂಪೆನಿ ಕಟ್ಟಿದ್ದ ಮಾಲೀಕರು ಬಿಕ್ಕಳಿಸಿ ಅಳುತ್ತಿದ್ದರು. ರಸ್ತೆ ಪಕ್ಕದ ಬೃಹದಾಕಾರದ ಈ ಮರಗಳು ಹೆಜ್ಜೇನು, ಬಾವಲಿ, ಅಸಂಖ್ಯಾತ ತಳಿಯ ಹಕ್ಕಿ ಪಕ್ಕಿ, ಹಾವು ತುಡವೆಗೆ ಆಸರೆಯಾಗಿದ್ದವು. ದೃಶ್ಯ ನೋಡಿದ ನಾವೂ ವಿಷಾದದೊಳಗೆ ಅದ್ದಿ ಹೋದೆವು. ಹೀಗೆ ಒಂದೊಂದಾಗಿ ನಾವು ನಿಕಾಲಿ ಮಾಡುತ್ತಿದ್ದೇವೆ. ಬ್ಲೆನ್ ಹೀಮ್ ಕದನವೆಂಬ ಪದ್ಯದಲ್ಲಿ ಕವಿ ಸೌಥಿ ಲೋಕ ಪ್ರಸಿದ್ಧಿಯ ಯುದ್ಧವೆಂದರೆ ಮರಣ ಸಾಮಾನ್ಯವೆನ್ನುತ್ತಾನೆ. ನಮ್ಮ ಸಿವಿಲ್ ಎಂಜಿನಿಯರುಗಳು ಲೋಕಪ್ರಸಿದ್ಧಿಯಾಗಬೇಕೆಂದರೆ ಬೋಳು ಬೋಳಾದ ರಸ್ತೆ ನಿರ್ಮಿಸುವುದು ಎಂದುಕೊಂಡಿದ್ದಾರೆ. ಅವರಿಗೆ ದೊಡ್ಡ ಶತ್ರುಗಳ ಹಾಗೆ ಕಾಣುವುದು ಪರಿಸರದ ಬಗ್ಗೆ ಕಾಳಜಿ ತೋರಿಸುವ ಜನ.

ನಮ್ಮ ಊರಿನ ಮರಗಳಲ್ಲಿ ಬಿಟ್ಟ ಕಾಯಿಗಳು ದಿನೆ ದಿನೆ ದುಂಡಗಾಗುತ್ತಿದ್ದವು. ಏಪ್ರಿಲ್ ಒಂದರಿಂದ ನಮ್ಮ ಇಸ್ಕೂಲಿಗೆ ರಜ. ನನ್ನ ಬೇಸಿಗೆಗಳು ಸಹ್ಯವಾಗುತ್ತಿದ್ದುದೇ ಊರಿನ ಸಂಪದ್ಭರಿತವಾದ ಜೇನು, ಮಾವು, ಹಲಸು, ಕಬ್ಬು, ಆಲೆಮನೆ, ಹಳ್ಳ, ಬಾವಿಗಳ ನೀರು ಮುಂತಾದವುಗಳಿಂದ. ಊರ ಪಕ್ಕದ ಜೋಗಿಲಳ್ಳ ಎಮ್ಮೆ, ಕುರಿ ಮೇಯಿಸುವುದಕ್ಕೆ ಪ್ರಶಸ್ತ ಸ್ಥಳ. ಬೇಸಿಗೆ ಬಂತೆಂದರೆ ನಾಟಿ ಹಸುಗಳನ್ನು ಕಾಡಿಗೆ ಅಟ್ಟುತ್ತಿದ್ದೆವು. ಅವು ಮೇಯ್ದು ನೀರು ಕುಡಿದು ಮನೆಗೆ ತಪ್ಪದೆ ಬರುತ್ತಿದ್ದವು. ಗೂಳಿಗಳು ಮಾತ್ರ ಬೆದೆ ಹತ್ತಿದ ಹಸುಗಳ ಹಿಂದೆ ಹೋಗಿಬಿಡುತ್ತಿದ್ದವು. ಅವುಗಳನ್ನು ಹುಡುಕಾಡುವ ಕಷ್ಟ ಬಿಟ್ಟರೆ ಉಳಿದಂತೆ ತೊಂದರೆ ಇರಲಿಲ್ಲ. ಈ ಎಮ್ಮೆಗಳು ಹಾಗಲ್ಲ. ಅವುಗಳ ಹಿಂದೆಯೆ ಇರಬೇಕು. ಅವಕ್ಕೆ ತಲೆ ಕೆಟ್ಟರೆ ಯಾರದೊ ತೋಟಗಳಿಗೆ ನುಗ್ಗುತ್ತಿದ್ದವು. ಊರು ಊರುಗಳ ಗಡಿಗಳನ್ನೆ ದಾಟಿ ಹೋಗುತ್ತಿದ್ದವು. ಅವುಗಳನ್ನು ಕಾಯುವಾಗ ತೋತಾಪುರಿ ಕಾಯಿ ಮತ್ತು ಉಪ್ಪು ಖಾರ ಆಸರೆಯಾಗುತ್ತಿದ್ದವು. ಹುಳಿ ಕಡಿಮೆ ಇರುವ ತೋತಾಪುರಿ, ಅಪರೂಪಕ್ಕೆ ಸಿಗುತ್ತಿದ್ದ ಕೊಬ್ಬರಿ ಮಾವಿನ ಕಾಯಿಗಳನ್ನು ಬಂಡೆಯ ಮೇಲೆ ಜಜ್ಜಿ ಉಪ್ಪು ಖಾರ ಬೆರೆಸಿ ತಿನ್ನುವುದೊಂದು ಸ್ವರ್ಗ. ಜೊತೆಯಲ್ಲಿರುತ್ತಿದ್ದ ಹುಡುಗಿಯರು ಕಡು ಹುಳಿಯ ಮಲಗೋಬ, ರಸಪುರಿ, ಬಾದಾಮಿ ಕಾಯಿಗಳನ್ನೆ ಜಜ್ಜಿ ಅರ್ಧ ಕಣ್ಣು ಮುಚ್ಚಿ ಆಹಾ ಎಂದು ತಿನ್ನುತ್ತಿದ್ದರು. ಬೆಳಗ್ಗೆ ರಾಗಿ ಮುದ್ದೆ ತಿಂದು ಹೋದರೆ ಮಧ್ಯಾಹ್ನದ ಊಟಕ್ಕೆ ಇವೆ ಆಸರೆ. ಒಂದಿಷ್ಟು ತಡಕಾಡಿದರೆ ಜೇನು ಸಿಗುತ್ತಿದ್ದವು. ಕೆಲವೊಮ್ಮೆ ಅದೃಷ್ಟವಿದ್ದರೆ ಹಲಸಿನ ಹಣ್ಣು ಸಿಗುತ್ತಿದ್ದವು.

ಉಗಾದಿ ಮುಗಿದು ತಿಂಗಳಾಗುವ ಹೊತ್ತಿಗೆ ಒಂದೊಂದೆ ಹಣ್ಣಾಗತೊಡಗುತ್ತಿದ್ದವು. ಅಷ್ಟೊತ್ತಿಗೆ ಧಗೆ ಹೆಗಲಿಗೇರುತ್ತಿತ್ತು. ಒಂದೆರಡು ಮಳೆ ಬೀಳುತ್ತಿದ್ದವು. ಮರಕ್ಕೆ ಕಚ್ಚಿ ಕೂತ ಜೀರ್ಗುಡುವ ಕೀಟಗಳು ಭೂಮಿ ಆಕಾಶಗಳನ್ನು ಜರ್ ಎಂಬ ಸದ್ದಿನಲ್ಲಿ ಮುಳುಗಿಸಿ ಹಾಕುತ್ತಿದ್ದವು. ಮೊದಲು ಹಣ್ಣಿಗೆ ಬರುತ್ತಿದ್ದುದೆ ಸೇಂದೂರ. ಬಾಲಕರಾದ ನಮ್ಮ ಕೈ ಚಳಕ ಶುರುವಾಗುತ್ತಿತ್ತು. ಪಾಕಕ್ಕೆ ಬಂದ ಕಾಯಿಗಳನ್ನು ಕಿತ್ತು ಹುಲ್ಲಿನ ಬಣವೆ, ಹೊಲಕ್ಕೆ ಹೊಡೆದ ಗೊಬ್ಬರದ ಗುಡ್ಡೆಗಳು, ಕಡೆಗೆ ಮಣ್ಣನ್ನೆ ತೋಡಿ ಬಚ್ಚಿಡುತ್ತಿದ್ದೆವು. ನಾಲ್ಕೈದು ದಿನಗಳಾದ ಮೇಲೆ ಹೂತಿಟ್ಟ ಗುರ್ತನ್ನು ನೆನಪಿಟ್ಟುಕೊಂಡು ತೋಡಿದರೆ ಬಿಸಿಗೆ ಕೆಲವು ಮೆತ್ತಗಾಗಿರುತ್ತಿದ್ದವು. ಕೆಲವು ಮಾಯವಾಗಿರುತ್ತಿದ್ದವು. ಬಚ್ಚಿಡಲು ನೆರವಾದ ಗೆಳೆಯ ಗೆಳತಿಯರೆಂಬ ದ್ರೋಹಿಗಳೆ ಕದ್ದು ಬಿಡುತ್ತಿದ್ದರು. ನಾವೂ ಅದನ್ನೆ ಮಾಡಿರುತ್ತಿದ್ದರೂ ಕೆಲವೊಮ್ಮೆ ಇದರಿಂದ ಕುರುಕ್ಷೇತ್ರವನ್ನೂ ಮೀರಿಸುವಂತೆ ಜಗಳ ಆಡುತ್ತಿದ್ದೆವು.

ಹೂ ಬಿಟ್ಟವೆಲ್ಲ ಹೇಗೆ ಕಾಯಿಗಟ್ಟುತ್ತಿರಲಿಲ್ಲವೊ ಹಾಗೆಯೆ ಕಾಯಾದವೆಲ್ಲ ಹಣ್ಣಾಗುತ್ತಿರಲಿಲ್ಲ. ಮಾವಿನ ಕಾಯಿ ಕೂಡ ನಿಸರ್ಗದ ಎಲ್ಲ ಕಾಟಗಳನ್ನು ತಡೆದುಕೊಂಡು ಏಗಬೇಕು. ಜೀವಿಗಳೂ ಅಷ್ಟೆ ತಾನೆ? ನೆನೆಸಿಕೊಂಡರೆ ಎಷ್ಟೊಂದು ಆಘಾತಗಳಿಂದ ಹೇಗೆ ಬಚಾವಾದೆವಪ್ಪ ಎನ್ನಿಸುತ್ತದೆ. ಮಾವೂ ಹಾಗೆಯೆ. ತುಸು ಬಿಸಿಲು, ಧಗೆ ಹೆಚ್ಚಾದರೆ ಮಿಡಿಯಲ್ಲೆ ಉದುರತೊಡಗುತ್ತವೆ. ಬಾಳ ಬೇಕಾದವು ಉದುರಿ ಹೋದರೆ ಸಂಕಟ ಹೆಚ್ಚೆ. ಮುಂಗಾರಿನ ರೌದ್ರ ಕುಣಿತವನ್ನು ಗೂಡು ಕಟ್ಟಿ ಮರಿಮಾಡಿದ ತಾಯಿ ಹಕ್ಕಿಯಂತೆ ಎದುರಿಸುತ್ತವೆ. ಮುಗಿಲೆತ್ತರ ಎದ್ದು